ನಿನ್ನ ಆ ಕಳ್ಳ ದೋಸ್ತಿ..ರೌಡಿ ಗೋಪಿ..? ನಿನ್ನ ಮುಖ ನೋಡಲು ನಾನು ಇಷ್ಟ ಪಡುವುದಿಲ್ಲ..ನೀನು ಮೊದಲು ಆಚೆ ನಡಿ..ನಡೀ ಹೊರಗೆ..' ರಾಯರು ಬಾಗಿಲ ಕಡೆಗೆ ಕೈ ತೋರಿಸಿ ಅಬ್ಬರಿಸಿದರು.

ಅವನು ಅಷ್ಟೇ ಸಿಟ್ಟಿನಿಂದ ಸೆಟೆದು ನಿಂತ,'ನಾನು ಹೋಗೋದಿಲ್ಲ..ಏನ್ಮಾಡ್ತೀರಾ..? ನಿಮ್ಗೇನು ಮಾಡಲು ಸಾಧ್ಯ..?'

'ಇದು ನನ್ನ ಮನೆ..ನನ್ನ ಮನೆಯೊಳಗೆ ಬಂದು ..ನನ್ಮೇಲೇನೇ ನಿನ್ನ ಪೊಗರು ತೋರಿಸ್ತೀಯಾ. ಎಷ್ಟು ಧೈರ್ಯ ನಿನಗೆ..?' ಎಂದವರು ನಿಂತಲ್ಲೆ ಚಡಪಡಿಸುತ್ತಿದ್ದ ಪತ್ನಿಯ ಕಡೆಗೆ ನೋಡುತ್ತ, 'ನೋಡಿದ್ಯಾ..? ಬೀದೀಲಿ ಬಿದ್ದವನನ್ನು ಮನೆಗೆ ತಂದರೆ ಅದರ ಪರಿಣಾಮ ಇಷ್ಟೇ..ಆ ಹೊಲಸು ಬುದ್ಧಿ ಎಲ್ಲಿಗೆ ಹೋಗುತ್ತೆ..? ಇದೇ ಮನೇಲಿ ಇರ್ತಾನಂತೆ..ನನ್ಗೆ ಖಂಡಿತವಾಗಿ ಅದು ಇಷ್ಟವಿಲ್ಲ..ಅವ್ನನ್ನು ಖಂಡಿತಾ ಈ ಮನೇಲಿ ನಾನು ಇಟ್ಕೊಳ್ಳುವುದಿಲ್ಲ..ಅವ್ನನ್ನ ಆಚೆ ತಳ್ತೀಯೋ..ಇಲ್ವೋ..?' ತಮ್ಮ ಆಕ್ರೋಶವನ್ನು ಹತ್ತಿಕ್ಕುತ್ತ ರಾಯರು ನುಡಿದರು.

'ಸ್ವಲ್ಪ ಸಮಾಧಾನ ಮಾಡ್ಕೊಳ್ಳಿ..ನೀವು ಹೀಗೆ ಎಗರಾಡಿದ್ರೆ..ಹೇಗೆ..? ನೀವು ಮನಸ್ಸಿಗೆ ಹಚ್ಕೋಬೇಡಿ..ನಿಮ್ಗೆ ಬಿ.ಪಿ. ಇದೆ..'

'ಇವ್ನ ಮುಖ ನೋಡ್ತಿದ್ರೆ..ಇವ್ನ ವರ್ತನೆ ನೋಡ್ತಿದ್ರೆ ..ನನ್ನ ರಕ್ತ ಕುದೀತಾ ಇದೆ..ಮೊದ್ಲು ಇವ್ನನ್ನು ಆಚೆ ಹಾಕು..' ಅವರ ಸಿಡುಕು ಮಾತುಗಳು, ರೋಷ ಅವನ ಮೇಲೆ ಯಾವ ಪರಿಣಾಮವೂ ಬಿದ್ದಂತೆ ಕಾಣಲಿಲ್ಲ. ಅವನು ಆರಾಮಾಗಿ ಹೋಗಿ ಸೋಫಾದ ಮೇಲೆ ಕುಳಿತವನು, ಆನಂತರ ಎದ್ದು ತಾನೇ ಬಿಸುಟ, ನೆಲದ ಮೆಲೆ ಬಿದ್ದಿದ್ದ ಚಪಾತಿಗಳನ್ನು ಹೆಕ್ಕಿ ಪ್ಲೇಟಿಗೆ ಹಾಕಿಕೊಂಡು ತಿನ್ನ ತೊಡಗಿದ.

'ಹೀಗೆ ಒಣ ರೊಟ್ಟಿ ತಿಂದು ಅಭ್ಯಾಸ ಇದೆ..ನನ್ಗೆ..ಸ್ವಲ್ಪ ನೀರು ಕೊಡ್ತೀಯಾ..?' ಅವನು ಒಣ ನಗೆ ನಕ್ಕ.

ಅವನ ಮಾತುಗಳಲ್ಲಡಗಿದ್ದ ನೋವು, ವಿಜಯಮ್ಮನ ಹೃದಯವನ್ನು ಇರಿಯಿತು. ತಾವೇ ಒಳ ಹೋಗಿ ಅವನಿಗೆ ಕುಡಿಯಲು ನೀರು ತಂದಿತ್ತರು. ಅದನ್ನು ಕುಡಿದವನು, 'ನಾನಿವತ್ತು ಎಲ್ಲೂ ಹೋಗೋದಿಲ್ಲ..ಇಲ್ಲೇ ಇರ್ತೀನಿ..ನನ್ನನ್ನು ಯಾರೂ ತಡೆಯುವ ಹಾಗಿಲ್ಲ..' ರಾಯರನ್ನುದ್ದೇಶಿಸಿ ನುಡಿಯುತ್ತ ಅದೇ ಸೋಫಾದಲ್ಲಿ ಕಾಲು ಚಾಚಿ ಅಡ್ಡ ಮಲಗಿದಾಗ ಅವನ ನಿರ್ಭಿಡ ವರ್ತನೆಗೆ ಅಪೂರ್ವ ಅಧೀರಳಾದಳು.

ಅವನು ತಮ್ಮೊಂದಿಗೇ, ಅದೇ ಮನೆಯಲ್ಲಿರುವುದನ್ನು ನೆನೆದು ವಿಹ್ವಲಗೊಂಡಳು.

ಅವಳು ಪ್ರಭಾಕರರಾಯರನ್ನು ಸಮೀಪಿಸಿ,

"ಅಂಕಲ್..ಯಾರಿದು..? ಮನೆಯಿಂದ ಆಚೆ ಹೋಗು ಅಂದ್ರೂನೂ ಭಂಡತನದಿಂದ ಹೀಗೆ ಕೂತಿದ್ದಾರೆ..? ಮೊದ್ಲು ಪೋಲಿಸ್ ಸ್ಟೇಷನ್ಗೆ ಫೋನ್ ಮಾಡಿ.." ಎಂದಳು.

ಅವಳ ಮಾತುಗಳನ್ನಾಲಿಸಿ ವಿಜಯಮ್ಮ ಅವಳೆಡೆಗೆ ಆಕ್ಷೇಪದ ನೋಟ ಬೀರುತ್ತ,"ಅಪೂರ್ವ..ನೀನು ನಮ್ಮನೆ ವಿಷ್ಯಕ್ಕೆ ತಲೆ ಹಾಕ್ಬೇಡಾ..ನಿನ್ಗೆ ಇದು ಸಂಬಂಧಿಸದ ವಿಷ್ಯ..ನೀನಿಲ್ಲಿಗೆ ಓದಲಿಕ್ಕೆ ಬಂದಿದ್ದೀಯಾ..ಅಷ್ಟು ಮಾಡು ಸಾಕು..ಹೋಗು ಇಲ್ಲಿಂದ.." ವಿಜಯಮ್ಮ ಗಡುಸಾಗಿ ನುಡಿದಾಗ ಅವರ ಮಾತಿನ ಧಾಟಿಗೆ, ಅಪೂರ್ವಳಿಗೆ ಅಪಮಾನದಿಂದ ಮುಖ ಕೆಂಪೇರಿತು. ಮನಸ್ಸಿಗೆ ತೀರಾ ಘಾಸಿಯಾಗಿ, ಅಲ್ಲಿ ನಿಲ್ಲಲಾರದೇ ಸೀದಾ ತನ್ನ ಕೋಣೆಗೆ ಬಂದು ಮಂಚದ ಮೇಲುರುಳಿದಳು.'ನಿನಗೆ ಸಂಬಂಧಿಸದ ವಿಷಯ..'

'ನಮ್ಮನೆ ವಿಷಯಕ್ಕೆ ನೀನು ತಲೆ ಹಾಕ್ಬೇಡಾ..' ಎಂದು ಒಂದೇ ಮಾತಿನಲ್ಲಿ ತನ್ನನ್ನು ಪರಕೀಯಳಾನ್ನಾಗಿ ಮಾಡಿಬಿಟ್ಟರಲ್ಲ..! ಈ ಮೂರು ವರ್ಷಗಳಲ್ಲಿ ಅವರಿಬ್ಬರೇ ತನ್ನ ಬಂಧುಗಳಾಗಿರಲಿಲ್ಲವೇ..? ತಾನೆಂದೂ ಈ ಮನೆಗೆ ಸೇರಿದವಳಲ್ಲ ಎಂಬ ಭಾವನೆಯೇ ತನಗೆ ಬಂದಿರಲಿಲ್ಲ..ಆದರೆ ವಿಜಯಮ್ಮ ಇಂದು ತಮ್ಮ ಸಿಟ್ಟಿನ ಭರದಲ್ಲಿ ತನಗೆ ತನ್ನ ಸ್ಥಾನ ತೋರಿಸಿಬಿಟ್ಟರು..! ಹೌದು..ತನಗೇನು ಹಕ್ಕಿದೆ..ಇವರ ಸಂಸಾರದ ವಿಚಾರದಲ್ಲಿ ತಲೆ ಹಾಕಲು..? ಎಷ್ಟಾದರೂ ತಾನು ಹೊರಗಿನವಳು..ಇವರ ಹಂಗಿನ ಅನ್ನಕ್ಕೆ ಬಿದ್ದವಳು..! ತನ್ನ ವ್ಯಾಸಂಗ ಮುಗಿದೊಡನೆ ತಾನು ಇಲ್ಲಿಂದ ಹೊರಟು ಬಿಡಬೇಕು.. ಜೀವನ ಪೂರ್ತಾ ಹಂಗಿನ ಆಸರೆಯಲ್ಲೇ ಬೆಳೆದ ತಾನು ಚೆನ್ನಾಗಿ ಓದಿ ನೌಕರಿ ಹಿಡಿದು ಸ್ವಾವಲಂಬಿಯಾಗಿ ಬದುಕಬೇಕು..ಇವರೇನು ತನಗೆ ಸಂಬಂಧಿಕರೇ..? ಬಂಧುಗಳೇ..? ತನಗೆ ಆಸರೆ ನೀಡಿದ ಔದಾರ್ಯವಂತರೆಂದು ಗೌರವ , ಪ್ರೀತಿ, ವಿಶ್ವಾಸ ತೋರಿಸುತ್ತಿದ್ದೆ..ಆದರೆ ಒಂದೇ ಕ್ಷಣಕ್ಕೆ 'ಸಂಬಂಧಿಸದವಳು' ಎಂದು ತನ್ನನ್ನು ತಿರಸ್ಕರಿಸಿಬಿಟ್ಟರಲ್ಲ..ಈಗ ಬಂದ ವ್ಯಕ್ತಿ ತನಗಿಂತಲೂ ಪ್ರಮುಖನಾಗಿಬಿಟ್ಟನಲ್ಲ ..ವಿಜಯಮ್ಮನಿಗೆ..! ಮೊದಲು ಮನೆ ಒಳಗೆ ಕಾಲಿಡಲೇ ನಿರಾಕರಿಸಿದವನು, ಈಗ ಹಠಮಾರಿತನದಿಂದ ಇಲ್ಲೇ ಉಳಿಯುವನೆಂದು ಬೆದರಿಸುತ್ತಿದ್ದಾನೆ..ವಯಸ್ಸಾದ ವ್ಯಕ್ತಿಗಳು ಮಾತ್ರ ಈ ಮನೆಯಲ್ಲಿದ್ದಾರೆಂದು ಅವರನ್ನು ಹೆದರಿಸಿ ಇಲ್ಲೇ ಉಳಿಯುವ ದಾರ್ಷ್ಟ್ಯತೆ ತೋರಿಸುತ್ತಿದ್ದಾನೆ.. ನೋಡಲು ಎಷ್ಟೊಂದು ಕೊಳಕ..! ಸ್ವಭಾವದಲ್ಲೂ ಅನಾಗರಿಕತನ ಎದ್ದು ಕಾಣುತ್ತದೆ.. ಅವನೇಕೆ ಈ ಮನೆಯಲ್ಲಿ ಉಳಿಯಬೇಕು? ಅವನೇಕೆ ಹಕ್ಕಿನಿಂದ ವರ್ತಿಸುತ್ತಿದ್ದಾನೆ..? ವಿಜಯಮ್ಮನ ಪ್ರೀತಿ ವಿಶ್ವಾಸವನ್ನು ಆತ ದುರುಪಯೋಗ ಪಡಿಸಿಕೊಳ್ಳುತ್ತಿದ್ದಾನೆ..ಅವನು ನಾಳೆ ಬೆಳಿಗ್ಗೆ ಇಲ್ಲಿಂದ ಹೊರಟು ಹೋದರೆ ಸಾಕು.. ಆತ ಇಲ್ಲೇ ಇದ್ದರೆ ಈ ಮನೆಯ ನೆಮ್ಮದಿ ಕದಡಿ ಹೋಗುವುದಂತೂ ನಿಶ್ಚಿತ..ಮೊದಲೇ ರಾಯರ ಮತ್ತು ವಿಜಯಮ್ಮನ ನಡುವೆ ಯಾವುದೋ ಕಾರಣಕ್ಕೆ ಶೀತಲ ಸಮರವಿದೆ..

ಒಂದೇ ಸೂರಿನಡಿ ಸಹಬಾಳ್ವೆ ನಡೆಸುತ್ತಿದ್ದರೂ ಅವರಿಬ್ಬರ ನಡುವಿನ ಸಂಬಂಧದಲ್ಲಿ ದಂಪತಿಯ ನಡುವೆ ಇರಬೇಕಾದ ಸೌಹಾರ್ದತೆ ಇಲ್ಲ..ಪ್ರೀತಿ ವಿಶ್ವಾಸಗಳು ಇದೆ ಎನ್ನುವುದಕ್ಕಿಂತಲೂ ಅದು, ಒಂದೇ ಸೂರಿನಡಿಯಲ್ಲಿ ಬಾಳಬೇಕಾದ ಕಾರಣಕ್ಕೆ ಪರಸ್ಪರ ಅನಿವಾರ್ಯವೆನಿಸುವಂಥ ಸಹಚರ್ಯ ಏರ್ಪಟ್ಟಿದೆ ಅಷ್ಟೇ. ಇಬ್ಬರೂ ಜೊತೆಗಿದ್ದರೂ, ಮಾನಸಿಕವಾಗಿ ಅವರಿಬ್ಬರ ನಡುವೆ ತುಂಬಾ ಅಂತರವಿದೆ ಎನ್ನುವುದು ತನಗೆ ಭಾಸವಾಗಿತ್ತು..ಅವರಿಬ್ಬರ ನಡುವಿನ ಅಂತಃಕಲಹಕ್ಕೆ ಕಾರಣವಾವೇನೆಂಬುದು ತನಗೆ ಸ್ಪಷ್ಟವಾಗಿರಲಿಲ್ಲ. ಆದರೂ ವಿಜಯಮ್ಮನ ಖಿನ್ನತೆ, ನೋವು, ರಾಯರ ದಿವ್ಯ ಗಾಂಭೀರ್ಯ ಈ ಎಲ್ಲದಕ್ಕೂ ಈ ಯುವಕನೇ ಕಾರಣನೇ ಎಂಬ ಸಂದೇಹ ಅಪೂರ್ವಳಿಗೆ ಬಂದಿತ್ತು. ಈ ಯುವಕ ಕತ್ತಲಲ್ಲಿ, ಈ ಮನೆಯ ಮುಂದೆ ಏಕೆ ಬಂದು ನಿಂತಿದ್ದ..? ಅವನಿಗೆ ಈ ಮನೆಯ ಗುರುತು ಹೇಗೆ ಗೊತ್ತು..? ಮೊದಲಿನಿಂದಲೂ ಆತ ಈ ಮನೆಗೆ ಪರಿಚಿತನೇ..? ಹಿಂದಿನ ದಿನ ನಾವೆಲ್ಲಾ ಅವನನ್ನು ದೇವಸ್ಥಾನದಲ್ಲಿ ಕಂಡದ್ದನ್ನು ಗಮನಿಸಿ, ಆತ ತಮ್ಮನ್ನು ಹಿಂಬಾಲಿಸಿಕೊಂಡು ಇಲ್ಲಿಯವರೆಗೂ ಬಂದಿದ್ದಾನೆ! ಆತನ ಆಗಮನ ಹಿಂದಿನ ಉದ್ದೇಶ ಏನಿರಬಹುದು..?

**(ಸಶೇಷ)**

## ಕಾದಂಬರಿ ಚೆನ್ನಾಗಿದೆ



ನಳ ದಮಯಂತಿ (ಡಾ.ಜಿ. ಕೃಷ್ಣಪ್ಪ) ಧಾರಾವಾಹಿ ಚೆನ್ನಾಗಿ ಬಂದಿದೆ. ಕನ್ನಡದ ಹಿರಿಮೆಯನ್ನು ಎತ್ತಿ ಹಿಡಿದ ಲೇಖಕರು ಹಾಗೂ ಸುಧಾಕ್ಕೆ ಧನ್ಯವಾದಗಳು.

—ಶಂಕರೇಗೌಡ ತುಂಬಕೆರೆ ಮಂಡ್ಯ, ವಿ.ಜಿ. ಗಾಯತ್ರಿ ಬೆಂಗಳೂರು, ಪ್ರದೀಪ್ ಎನ್. ಚೆಲುವರಸನಕೊಪ್ಪಲು, ಎಂ.ಮೃತ್ಯುಂಜಯಪ್ಪ ಚಿತ್ರದುರ್ಗ, ಶಾಂತಾ ನಾಗರಾಜ್ ಕೆ. ಬೆಂಗಳೂರು

## ಸರಾಗವಾಗಿ ಓದಿಸಿತು

ಕಾದಂಬರಿ ಮೊದಲಿನಿಂದ ಕೊನೆಯವರೆಗೂ ಸರಾಗವಾಗಿ ಓದಿಸಿಕೊಂಡು ಹೋಯಿತು.

—ಜಿ.ವೆಂಕಟರಾಮಯ್ಯ ಬೆಂಗಳೂರು

## ಬೇಗ ಮುಗಿಯಿತೇ?

ಕಾದಂಬರಿ ಇಷ್ಟು ಬೇಗ ಮುಗಿಯಿತೇ? ಕಥೆ ತುಂಬ ಚೆನ್ನಾಗಿತ್ತು.

—ಸಂಪತ್‌ಕುಮಾರ್ ಮೈಸೂರು